ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವುದು

850(873); ಶ್ರೀ ಭೀಮಾ ನಾಯ್ಕ ಎಸ್. (ಹಗರಿಬೊಮ್ಮನಹಳ್ಳಿ)

ಅ) ಹಗರಿಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ತಂಬ್ರಹಳ್ಳಿ ಮತ್ತು ಮರಿಯಮ್ಮನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ:

ಆ) ಹಾಗಿದ್ದಲ್ಲಿ, ಯಾವಾಗ ಮೇಲ್ದರ್ಜೆಗೇರಿಸಲಾಗುವುದು:

ಇ) ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಪ್ರಸಕ್ತ ಸಾಲಿನಲ್ಲಿಯೇ ಅನುದಾನವನ್ನು ಬಿಡುಗಡೆ ಮಾಡಿ ಆಡಳಿತಾತ್ಮಕ ಅನುಮೋದನೆ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಯು.ಟಿ.ಖಾದರ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಅನ್ವಯಿಸುವುದಿಲ್ಲ.

ಬಸ್ಸುಗಳ ಕೊರತೆ

851(1143); ಶ್ರೀ ಭೂಸನೂರ ರಮೇಶ ಬಾಳಪ್ಪ (ಸಿಂಧಗಿ)

ಅ) ಬಿಜಾಪುರ ಜಿಲ್ಲೆಯ ಸಿಂದಗಿ ಬಸ್ ಡಿಪೋದಲ್ಲಿ ಬಸ್ಸುಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಿಂದ ಬಿಜಾಪುರ ಜಿಲ್ಲೆಯ (ಎಲ್ಲಾ ಬಸ್) ಡಿಪೋಗಳಿಗೆ ಹೊಸ ಬಸ್ಸುಗಳನ್ನು ಒದಗಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ, ಇಲ್ಲಿಯವರೆಗೆ ಬಿಜಾಪುರ ಜಿಲ್ಲೆಯ (ಎಲ್ಲಾ ಬಸ್) ಡಿಪೋಗಳಿಗೆ ಎಷ್ಟು ಹೊಸ ಬಸ್ಸುಗಳನ್ನು ಹಂಚಿಕೆ ಮಾಡಲಾಗಿದೆ (ವಿವರ ಒದಗಿಸುವುದು)?

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು)

ಅ) ಬಿಜಾಪುರ ಜಿಲ್ಲೆಯ ಸಿಂದಗಿ ಬಸ್ ಡಿಪೋದಲ್ಲಿ ವಾಹನಗಳ ಕೊರತೆಯಿರುವದಿಲ್ಲ.

ಆ) ಪ್ರಸಕ್ತ ಸಾಲಿನಲ್ಲಿ ಬಿಜಾಪುರ ವಿಭಾಗಕ್ಕೆ 30 ಹೊಸ ವಾಹನಗಳನ್ನು ಒದಗಿಸಲಾಗಿದ್ದು, ಇನ್ನುಳಿದ 105 ವಾಹನಗಳನ್ನು ಮಾರ್ಚ್ 2014ರ ಅಂತ್ಯದೊಳಗೆ ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

ಇ) 2013–14ನೇ ಸಾಲಿನಲ್ಲಿ ಇದುವರೆಗೆ ಬಿಜಾಪುರ ವಿಭಾಗಕ್ಕೆ 30 ಹೊಸ ಬಸ್‌ಗಳನ್ನು ಹಂಚಿಕೆ ಮಾಡಲಾಗಿದೆ. ವಿವರ ಈ ಕೆಳಗಿನಂತಿದೆ.

ಕ್ರ ಸಂ	ಘಟಕ	ವಾಹನಗಳ ಸಂಖ್ಯೆ
1	ಬಿಜಾಪುರ ಘ–1	15
2	ಬಿಜಾಪುರ ಘ–2	09
3	ಸಿಂಧಗಿ	04
4	ಇಂಡಿ	02
5	ಬ.ಬಾಗೇವಾಡಿ	0
6	ತಾಳಿಕೋಟೆ	0
7	ಮುದ್ದೇಬಿಹಾಳ	0
	ಒಟ್ಟು	**30**